# 6

# ಯೇಸು ತಾನು ಯಾರೆಂದು ತಿಳಿಸಿದ್ದನು?

"ಯೇಸು ದೇವರಾಗಿದ್ದಾನೋ?" ಎಂಬ ವಿಷಯದ ಕುರಿತು ಮಾತನಾಡಿದ ಒಬ್ಬ ಪರಿಣಿತನ ತರಗತಿಗೆ ಒಮ್ಮೆ ನಾನು ಹಾಜರಾಗಿದ್ದೆನು. ಇಂತಹ ಕ್ಲಿಷ್ಟಕರವಾದ ಪ್ರಶ್ನೆಯ ಕುರಿತ ಚರ್ಚೆಯನ್ನು ಆಲಿಸಲು, ಆಸಕ್ತರಾದ ಅನೇಕ ಜನರು ಅಲ್ಲಿ ಸೇರಿ ಬಂದಿದ್ದರು. ಈ ಪ್ರಶ್ನೆಗೆ ಉತ್ತರವನ್ನು ಪಡೆಯುವ ಮೊದಲು, ಯೋಹಾನನ ಸುವಾರ್ತೆಯಲ್ಲಿರುವ ದೇವರ ಕುರಿತಾದ ಆಲೋಚನೆಗಳನ್ನು ಬದಿಗಿಡಬೇಕು ಅಂದನು. ಏಕೆಂದರೆ ಯೋಹಾನನ ಸುವಾರ್ತೆಯಲ್ಲಿ ಯೇಸುವಿನ ದೈವೀಕ ಸ್ವಭಾವದ ಕುರಿತು ಒತ್ತಿ ಹೇಳಲಾಗಿದೆ. ಹೊಸ ಒಡಂಬಡಿಕೆಯಲ್ಲಿರುವ ಈ ವಿಚಾರದ ಕುರಿತಾದ ಯಾವುದೇ ಆಲೋಚನೆಯನ್ನು ಪರಿಗಣಿಸಬಾರದು, ಏಕೆಂದರೆ ಈ ಆಲೋಚನೆಗಳನ್ನು ಆದಿ ಕ್ರೈಸ್ತರು ಸೃಷ್ಟಿಸಿರುವದರಿಂದ, ಇವುಗಳು ಯೇಸುವಿಗೆ ಸಂಬಂಧ ಪಟ್ಟಿರುವದಿಲ್ಲ. ಆನಂತರ ಸಭೀಕರು "ಯೇಸು ದೇವರಾಗಿದ್ದಾನೋ?" ಎಂಬ ಪ್ರಶ್ನೆಯನ್ನು ಕೇಳಬಹುದು ಎಂದನು. ಪ್ರಸಂಗಿಯು ಒಂದೇ ಒಂದು ವಿಧವಾದ ನಿರ್ಣಯವನ್ನು ಮಾಡಿದನಷ್ಟೆ. ಇಂತಹ ನಕರಾತ್ಮಕವಾದ ಊಹೆಗಳನ್ನು ಮಾಡಿ, ಇರುವ ಸಾಕ್ಷಾಧಾರಗಳನ್ನು ಅವನು ತೊಡೆದು ಹಾಕಿದ್ದರಿಂದ ಅವನಿಗೆ ನಕರಾತ್ಮಕವಾದ ಪ್ರಶ್ನೆಗಳೇ ಎದುರಾದವು.

ನಜರೇತಿನ ಯೇಸುವಿನ ಅಸ್ತಿತ್ವದ ಕುರಿತು ಒಂದು ಪ್ರಮುಖವಾದ ಐತಿಹಾಸಿಕ ವಿಚಾರವಿರುತ್ತದೆ: ಆತನು ತನ್ನ ಬಗ್ಗೆ ಏನು ಹೇಳಿರುವನು? ಆತನು ಇಸ್ರಾಯೇಲ್ಯರ ಮೆಸ್ಸೀಯ ನಾಗಿರಲಿಲ್ಲ, ದೇವಕುಮಾರನೂ ಮತ್ತು ದೇವರು ಮಾನವ ಶರೀರ ಹೊಂದಿದ್ದನು ಎಂಬದು ಅನೇಕರ ವಾದವಾಗಿದೆ. ಯೇಸುವಿನ ಬಗ್ಗೆ ಪ್ರಚಲಿತವಾಗಿ ಇದೇ ವಾದವಿರುತ್ತದೆ. ಯೇಸು ತಾನೇ ಈ ವಿಧವಾದ ಹೇಳಿಕೆಗಳನ್ನು ನೀಡದೆ ಇದ್ದರೂ, ಸುವಾರ್ತೆಗಳಲ್ಲಿ ಈ ವಿಚಾರವನ್ನು ಏಕೆ ನಮೂದಿಸಿರುವರು ಎಂಬ ಪ್ರಶ್ನೆ? ಉದ್ಭವಿಸುತ್ತದೆ. ಈ ವಿಚಾರವನ್ನು ನಂತರದಲ್ಲಿ ಬಂದ ಕ್ರೈಸ್ತರು ಸುವಾರ್ತೆಗಳಲ್ಲಿ ನಮೂದಿಸಿದರು, ಆದ್ದರಿಂದ ಅದರಲ್ಲಿ ಬರೆದಿರುವ ಅಂಶಗಳಲ್ಲಿ ಯೇಸು ತಾನೇ ತನ್ನ ಪರವಾಗಿ ನೀಡಿದ ಹೇಳಿಕೆಗಳಂತಿವೆ. ಇನ್ನೊಂದು ಅರ್ಥದಲ್ಲಿ, ಯೇಸು ಮಾಡಿದನು ಎಂದು ಹೇಳಲಾಗಿರುವ ಸಂಗತಿಗಳು ಸತ್ಯವಲ್ಲ ಎಂಬ ಪ್ರಚಾರವಾಗಿದೆ, ಕ್ರಿಸ್ತನ ಕುರಿತು ಬರೆದಿರುವ ಕ್ರೈಸ್ತರ ಹೇಳಿಕೆಗಳು ಸುಳ್ಳಾಗಿರುತ್ತವೆ ಎಂಬುದು ಅವರ ವಿಚಾರ.

ಯೇಸು ಕ್ರಿಸ್ತನ ಕುರಿತಾದ ಮಾಹಿತಿಗಳನ್ನು ಸುವಾರ್ತೆಗಳಲ್ಲಿ ಮಾತ್ರ ನೀಡಲಾಗಿದೆ. ಈ ಮಾಹಿತಿಗಳನ್ನು ಅಲ್ಲಗಳೆಯುವವರು, ಯೇಸುವಿನ ಕುರಿತಾದ ಸತ್ಯಾಂಶಗಳನ್ನು ಅಲ್ಲಗಳೆ ಯುವವರಾಗಿದ್ದಾರೆ. ಇಲ್ಲಿ ಅನೇಕ ವಿಧವಾದ ಅನುವಾದಗಳನ್ನು ನೋಡ ಬಹುದಾಗಿದೆ. ಅನುವಾದ ಮಾಡುವವರು, ಆತನು ಹಿಂದೆ ಏನಾಗಿದ್ದ ಎಂಬ ಮುಂದಾಲೋಚನೆಯನ್ನು ಮಾಡುತ್ತಾರೆ, ಅವರ ಯೋಚನೆಗೆ ಬಾರದನ್ನು ಸುವಾರ್ತೆಗಳಿಂದ ಪ್ರತ್ಯೇಕ ಮಾಡುತ್ತಾರೆ. "ಜೀಸಸ್ ಸೆಮಿನಾರ್"ರವರು ಯೇಸುವಿನ ಕುರಿತಾಗಿ ಹೇಳಲಾಗಿರುವ ಕ್ರೈಸ್ತರ ಆಲೋಚನೆಗಳಿಂದ ಯೇಸುವನ್ನು ಸ್ವತಂತ್ರಪಡಿಸುತ್ತೇವೆ ಎಂದು ಹೇಳುತ್ತಾರೆ.[1] ಅವರು ಹೊಸ ಒಡಂಬಡಿಕೆಯಲ್ಲಿರುವ ಯೇಸುವನ್ನು ವಿಶ್ಲೇಷಣೆ ಮಾಡುತ್ತಾರೆ.

ಜನರು ತಾವು ಈಗಾಗಲೇ ನಂಬಿರುವ ಸಂಗತಿಗಳ ಸಾಕ್ಷಾಧಾರಗಳನ್ನು ತಿರುಚಲಾಗಿದೆ ಎಂದು ಭಾವಿಸುತ್ತಾರೆ. ನಾವೆಲ್ಲರು ಕೆಲವು ಭಾವನೆಗಳನ್ನು ಹೊಂದಿರುತ್ತೇವೆ, ಆದ್ದರಿಂದ ಸಾಕ್ಷಾಧಾರಗಳಂತೆ ನಾವುಗಳು ವಿಚಾರಗಳನ್ನು ಅಂಗೀಕರಿಸುತ್ತೇವೆ ಅಥವಾ ತಿರಸ್ಕರಿಸುತ್ತೇವೆ. ಕೆಲವರು ವಸ್ತುನಿಷ್ಟೆಯಂತೆ ನಂಬುತ್ತಾರೆ ನಾವೆಲ್ಲರು ನಮ್ಮದೇ ಆದ ನಂಬಿಕೆಯನ್ನು

ಹೊಂದಿರುತ್ತೇವೆ, ಮುಖ್ಯವಾಗಿ ಯೇಸುವಿನ ಅಸ್ತಿತ್ವದ ಕುರಿತಾಗಿ ನಮ್ಮದೆ ಆದ ಊಹೆಗಳನ್ನು ನಾವು ಹೊಂದಿದ್ದು ಸತ್ಯವನ್ನು ನಮ್ಮ ಅನಿಸಿಕೆಯಂತೆ ತೂಗದೆ, ಯಥಾರ್ಥವಾದ ಆಲೋಚನೆ ಯನ್ನು ನಾವುಗಳು ಮಾಡಬೇಕು.

ಈ ಹಿಂದೆ ನಾನು ಹೇಳಿರುವಂತೆ, ಸುವಾರ್ತೆಯು ನಂಬಲರ್ಹವಾದ ಸತ್ಯಾಂಶಗಳನ್ನು ತಿಳಿಸುವದರಿಂದ, ಅದನ್ನು ಕೇವಲ ನಂಬಿಕೆಯ ಮೂಲಕ ಅರಿಯಲು ಪ್ರಯತ್ನ ಪಡದೆ, ಐತಿಹಾಸಿಕವಾಗಿಯೂ ಅರಿಯಬೇಕಾಗುತ್ತದೆ. ನಕರಾತ್ಮಕ ಭಾವನೆ ಹೊಂದಿರುವವರು, ತಮ್ಮ ಅನಿಸಿಕೆಗಳಿಗೆ ಸಾಕ್ಷಾಧಾರವನ್ನು ನೀಡಬೇಕಾಗುತ್ತದೆ. ಕಾಲಾನುಕ್ರಮದಿಂದ ಸುವಾರ್ತೆಗಳು ಐತಿಹಾಸಿಕವಾದ ಸಾಕ್ಷಾಧಾರಗಳನ್ನು ನೀಡುತ್ತಾ ಬಂದಿದೆ. ಆದ್ದರಿಂದ ಸುವಾರ್ತೆಗಳಲ್ಲಿ ಹೇಳಲ್ಪಟ್ಟಿರುವ ಯೇಸುವಿನ ಸತ್ಯಾಂಶವನ್ನು ಏಕೆ ಸಂದೇಹಿಸಬೇಕು? ಅದನ್ನು ನಂಬುವಂಥದ್ದು ಸ್ವಂತ ವಿಚಾರವೇ ಸರಿ. ಐತಿಹಾಸಿಕ ಕುರುಹುಗಳು ಆತ್ಮೀಕ ಸಂಗತಿಗಳನ್ನು ಊರ್ಜಿತಮಾಡಲು, ಅಥವಾ ತಿರಸ್ಕಾರ ಮಾಡಲು ಸಾಧ್ಯವಿಲ್ಲ. ಸಾಕ್ಷಿಗಳೇ ಮಾತನಾಡಲು ಅವಕಾಶ ಮಾಡಿಕೊಡೋಣ.

ಲೂಕನು ತಾನು ಇತಿಹಾಸವನ್ನು ಅರಿತವನಾಗಿ ತನ್ನ ಸುವಾರ್ತೆಯನ್ನು ಬರೆದಿರುವನು. ತನಗೆ ದೊರಕಿದ ಮಾಹಿತಿಯನ್ನು ಸಂಶೋಧನೆ ಮಾಡಿದವನಾಗಿ ಥಿಯೋಫಿಲನಿಗೆ ಬರೆದಿರುವನು, ಅವನ ಆರಂಭದ ಪದಗಳೇನೆಂದರೆ:

> ಶ್ರೀಮತ್ ಥೆಯೋಫಿಲನೇ, ನಮ್ಮಲ್ಲಿ ನಿಶ್ಚಯಕ್ಕೆ ಬಂದಿರುವ ಕಾರ್ಯಗಳನ್ನು ಮೊದಲಿಂದ ಕಣ್ಣಾರೆ ಕಂಡು ಸುವಾರ್ತಾವಾಕ್ಯವನ್ನು ಸಾರುತ್ತಿದ್ದವರು ನಮಗೆ ತಿಳಿಸಿದ ಪ್ರಕಾರ ಆ ಕಾರ್ಯಗಳನ್ನು ಚರಿತ್ರ ರೂಪವಾಗಿ ಬರೆಯುವದಕ್ಕೆ ಅನೇಕರು ಪ್ರಯತ್ನಿಸಿರಲಾಗಿ ನಾನು ಬುಡದಿಂದ ಎಲ್ಲವನ್ನೂ ಚೆನ್ನಾಗಿ ವಿಚಾರಿಸಿದವನಾದಕಾರಣ ಅವುಗಳನ್ನು ನಿನಗೆ ಕ್ರಮವಾಗಿ ಬರೆಯುವದು ಒಳ್ಳೇದೆಂದು ನನಗೂ ತೋಚಿತು. ನಿನಗೆ ಉಪದೇಶಿಸಿರುವ ವಿಷಯಗಳು ಯಥಾರ್ಥವಾದವುಗಳೆಂದು ಇದರಿಂದ ನೀನು ಗೊತ್ತುಮಾಡಿಕೊಳ್ಳಬಹುದು (ಲೂಕ 1:1-4; ESV).

ಯೆಹೂದ್ಯರ ಅರಸನಾದ ಹೆರೋದನ ಕಾಲದಲ್ಲಿ ಎಂದು ಇತಿಹಾಸದ ಘಟನೆಯನ್ನು ಲೂಕನು ತಿಳಿಸುತ್ತಾ: "ಸುವಾರ್ತೆಯನ್ನು ಆರಂಭಿಸಿರುವನು ..." (ವಚನ 5). ಲೂಕ 3:1, 2 ರಲ್ಲಿರುವ ಚಾರಿತ್ರಿಕ ಹಿನ್ನಲೆಯನ್ನು ನೋಡಿರಿ. ಅವನ ಬರವಣಿಗೆಯಲ್ಲಿ "ಒಂದಾನೊಂದು - ಕಾಲದಲ್ಲಿ - ಎಂಬ ಶೈಲಿಯು ಇರುವದಿಲ್ಲ."

ಲೂಕನು ಯಥಾರ್ಥವಾದ ಕಾರ್ಯಗಳನ್ನು ಮಾಡಿ ಮುಗಿಸಿರುವನು. ಯೇಸುವಿನ ಕುರಿತಾಗಿ ಬರೆಯುವ ಅನೇಕ ಯತ್ನಗಳನ್ನು ಮಾಡಿರುವನು. ತನ್ನ ಕಾರ್ಯಗಳನ್ನು ಕ್ರಮಾಂಕವಾಗಿ ಬರೆಯಲು, ಅವುಗಳನ್ನು ಆಳವಾಗಿ ಅರಿತುಕೊಂಡಿದ್ದನು. (ಇತರರು ಕ್ರಮವಾಗಿ ಬರೆದಿರುವದಿಲ್ಲ ಎಂದು ತಿಳಿದನೇ? ನಾವು ಅರಿಯೆವು ಮತ್ತಾಯ ಮಾರ್ಕ ಲೂಕ ಹಾಗೂ ಯೋಹಾನನ ಕುರಿತು ತಿಳಿದಿರುವದಿಲ್ಲ.) ಲೂಕನು ಇತರರಂತೆ, ಕಣ್ಣಾರೆ ಕಾಣದಿದ್ದರು, ಕಂಡವರಿಂದ ಅರಿತು ಬರೆದಿರುವನು. ಕಣ್ಣಾರೆ ಕಂಡು ಸುವಾರ್ತಾ ವಾಕ್ಯವನ್ನು ಸಾರುತ್ತಿದ್ದವರು ತಿಳಸಿದ್ದನ್ನೇ ಬರೆದಿರುವನು (ಲೂಕ 1:2). ಲೂಕನು ಬರೆದ ಉದ್ದೇಶದ ಕಡೆಗೆ ಗಮನವಿಡಿರಿ: ನಿನಗೆ ಉಪದೇಶಿಸಿರುವ *ವಿಷಯಗಳು ಯಥಾರ್ಥವಾದವುಗಳೆಂದು* ನೀನು ತಿಳಿದುಕೊಳ್ಳ ಬೇಕು (ಲೂಕ 1:4; ಒತ್ತಿ ಹೇಳಿದ್ದು ನನ್ನದು). ಥಿಯೋಫಿಲನು ಈಗಾಗಲೇ ಕ್ರೈಸ್ತನಾಗಿರುವದು ದೃಢಪಟ್ಟಿರುವದಿಲ್ಲ. ಕ್ರೈಸ್ತತ್ವದ ಕುರಿತು ಅಲ್ಪ ಜ್ಞಾನವನ್ನು ಅವನು ಹೊಂದಿರಬಹುದು. ಆ ತಿಳುವಳಿಕೆ ಸಾಕಾಗಿರಲಿಲ್ಲ. ನಿಜಾಂಶಗಳನ್ನು ಥಿಯೋಫಿಲನು ಅರಿಯಬೇಕೆಂದು ಲೂಕನು ಬಯಸಿದನು. ನಡೆದಿರುವ ಘಟನಾವಳಿಗಳನ್ನು ಸ್ಪಷ್ಟವಾಗಿ ತಿಳಿಸಿದನು (ನೋಡಿರಿ ಅಪೊಸ್ತಲರ ಕೃತ್ಯಗಳು 1:1). ಲೂಕನು ಹೇಳಿರಬಹುದಾದ ಸಂಗತಿಗಳು

ಸತ್ಯಸಂಗತಿಗಳೇ ಎಂಬುದಕ್ಕೆ ಇದು ಕುರುಹಾಗಿದೆ.

ಅದೇ ರೀತಿಯಲ್ಲಿ ಇತರೆ ಸುವಾರ್ತೆಗಳು ಸಹ ಐತಿಹಾಸಿಕ ವಿಚಾರಗಳನ್ನು ತಿಳಿಸದೆ ಇರುವದರಿಂದ, ಲೂಕನ ಸುವಾರ್ತೆಯನ್ನು ಸಂದೇಹಿಸಿರುವ ಹಾಗೆ ಇವುಗಳನ್ನು ಸಹ ಸಂದೇಹಿಸುವ ಸಾಧ್ಯತೆಗಳಿವೆ. ಯಾರು ಸಹ ಯೇಸುವಿನ ಇತಿಹಾಸವನ್ನು ಸ್ಪಷ್ಟವಾಗಿ ತಿಳಿಸಿರುವದಿಲ್ಲ. ಅಂದಿನ ಆದಿಸಭೆಯು ಇವರೆಲ್ಲರೂ ತಿಳಿಸಿದ ಯೇಸುವಿನ ವಿಚಾರವನ್ನು ಒಪ್ಪಿಕೊಂಡರು. ಕ್ರಿಸ್ತನ ಕುರಿತಾದ ಈ ಇತಿಹಾಸವು ಎರಡು ಸಾವಿರ ವರ್ಷಗಳ ಪುರಾತನ ವಾಗಿದೆ. ನಾವುಗಳು ಅದನ್ನು ಸರಳವಾಗಿ ಹಾಗೂ ಆಳವಾಗಿ ಅಂಗೀಕರಿಸಿಕೊಳ್ಳಬೇಕು, ಕಣ್ಣಾರೆ ಕಂಡು, ಕಣ್ಣಾರೆ ಕಂಡವರ ಸಾಕ್ಷಾಧಾರಗಳನ್ನು ನಾವುಗಳು ಒಪ್ಪಬೇಕು.

## ಯೆಹೂದ್ಯರ ಅರಸನು ಹಾಗೂ ನಿಜವಾದ ಇಸ್ರಾಯೇಲ್ಯರ ಪ್ರತಿನಿಧಿ

ಯೇಸು ತಿಳಿಸಿದ ಸಂಗತಿಗಳು ಕೇವಲ ಬಾಯಿಮಾತಿನ ಪದಗಳಾಗಿರದೆ, ಆತನು ಮಾಡಿದ ಕ್ರಿಯೆಗಳಲ್ಲಿ, ಹಳೆಯ ಒಡಂಬಡಿಕೆಯಲ್ಲಿ ತಿಳಿಸಿರುವ ಕಾರ್ಯಗಳು ಪ್ರತ್ಯಕ್ಷವಾಗಿವೆ. ಅವುಗಳನ್ನು ಸಾಧನೆಗೊಂಡ ಸಾಮ್ಯಗಳು ಎಂದು ಕರೆಯಬಹುದು.

ಉದಾಹರಣೆ, ಮಾರ್ಕ 3:13-19ರಲ್ಲಿ, ಯೇಸು ತನ್ನ ಹನ್ನೆರಡು ಮಂದಿ ಅಪೊಸ್ತಲರನ್ನು ನೇಮಕ ಮಾಡಿದನು (ಮಾರ್ಕ 3ರಲ್ಲಿ ಕರೆಯಲ್ಪಟ್ಟಿರುವದಿಲ್ಲ). ಅನೇಕ ಮಂದಿ ಶಿಷ್ಯಂದಿರಿದ್ದರೂ, ಆತನಿಗೆ ಸಮೀಪಸ್ತರಾದ *ಹನ್ನೆರಡು* ಮಂದಿ ಶಿಷ್ಯರಿದ್ದರು. ಯೇಸು ತಾನು ಹೊರಟು ಹೋದ ನಂತರ, ಅವರು ಸೇವೆ ಮಾಡುವ ಕಾರ್ಯವನ್ನು ಮುಂದುವ ರೆಸಬೇಕೆಂದು ಅವರಿಗೆ ಉಪದೇಶಗಳನ್ನು ಮಾಡಿದನು. ಆತನು ಏಕೆ ಇವರನ್ನು ನೇಮಿ ಸಿದನು ಎಂಬ ವಿಷಯ ಆಶ್ಚರ್ಯಚಕಿತವೇ? ಏಕೆಂದರೆ ಕೇವಲ ಹತ್ತು ಜನರನ್ನು, ಇಪ್ಪತ್ತು ಅಥವಾ ಅದಕ್ಕಿಂತಲೂ ಹೆಚ್ಚಾದ ಶಿಷ್ಯರನ್ನು ನೇಮಕ ಮಾಡಲಿಲ್ಲ? ಅಪೊಸ್ತಲರ ಕೃತ್ಯಗಳು 1:15-26ರಲ್ಲಿ ಯೇಸು ಪರಲೋಕಕ್ಕೆ ಏರಿ ಹೋಗುವಾಗ, ಕೇವಲ ಕೆಲವು ಶಿಷ್ಯರನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದನು (ಸುಮಾರು 120), ಯೂದನ ಬದಲಾಗಿ ಮತ್ತೀಯನನ್ನು ಆಯ್ಕೆ ಮಾಡಿದನು. ನಿಖರವಾಗಿ ಹನ್ನೆರಡು ಜನರೇ ಇದ್ದರು. ಮೂಲತಃ ಇದ್ದ ಶಿಷ್ಯರೆಲ್ಲರೂ ಸಾಯುತ್ತಿರಲಾಗಿ (ಅಪೊಸ್ತಲರ ಕೃತ್ಯಗಳು 12:1, 2, ಯಾಕೋಬನ ಮರಣದ ದಾಖಲು), ಸತ್ತವರ ಬದಲಾಗಿ (ಯೂದನ ಉದಾಹರಣೆಯಂತೆ) ಇತರರನ್ನು ಬದಲಾಯಿಸಲಿಲ್ಲ. ಸಂಖ್ಯೆ ಹನ್ನೆರಡು, ಒಂದು ಗುರುತರವಾದ ಚಿಹ್ನೆಯಾಗಿದೆ.

ಇಸ್ರಾಯೇಲ್ ಜನಾಂಗವನ್ನು ಪ್ರಾರಂಭಿಸಲು ದೇವರು ಹನ್ನೆರಡು (ಯಾಕೋಬನ ಹನ್ನೆರಡು ಜನ ಮಕ್ಕಳು), ಮೂಲ ವಿಷಯಗಳನ್ನು ಉಪಯೋಗಿಸಿದಂತೆ, ದೇವರ ಹೊಸ ಜನರನ್ನು ಮುನ್ನೆಡೆಸಲು ಯೇಸು ಹನ್ನೆರಡು ಜನ ಅಪೊಸ್ತಲರನ್ನು ನೇಮಿಸಿದನು. "ವಿನೂತನ ಇಸ್ರಾಯೇಲ್ಯರ" ಸೂಚನೆಯಾಗಿ ಯೇಸು ಈ ಕಾರ್ಯವನ್ನು ಮಾಡಿದನು; ಆದ್ದರಿಂದ ಅಧಿಕಾರಯುತವಾದ ಹನ್ನೆರಡು ನಾಯಕರ ಅಗತ್ಯತೆಯನ್ನು ಯೇಸು ಪೂರೈಸಿದನು. (ನೋಡಿರಿ ಪ್ರಕಟನೆ 21:12-14. ದೇವ ಜನರ ಸೂಚನೆಗಾಗಿ ನೀಡಿರುವ "ಹನ್ನೆರಡು" ಜನರ ಉದಾಹರಣೆಯನ್ನು ಗಮನಿಸಿರಿ.)

ಹೊಸ ಇಸ್ರಾಯೇಲ್ಯರ ನಾಯಕರ ಗುರುತಿಗಾಗಿ ಯೇಸು ಹನ್ನೆರಡು ಜನ ಅಪೊಸ್ತಲರನ್ನು ನೇಮಿಸಿಕೊಂಡು, ತಾನು ಇಸ್ರಾಯೇಲ್ಯರ ಅರಸನು ಎಂಬ ಸೂಚನೆಯನ್ನು ನೀಡಿದನು. ಆತನು ಯೆರೂಸಲೇಮಿಗೆ ಅರಸನಾಗಿ ಪ್ರವೇಶ ಮಾಡಿದ ಸಂಗತಿಯು ಸಹ ಇದಕ್ಕೆ ಸಾಕ್ಷಿಯಾಗಿದೆ. ಮತ್ತಾಯ 21:1-5 ಆತನು ಕತ್ತೆಯ ಮೇಲೆ ಹೋದನು ಎಂಬುದಾಗಿದೆ. ಈ ಒಂದು ಕಾರ್ಯವು ಅರಸನಿಗೆ ಸಹಜವಾದದ್ದು ಎಂದು ತೋರಿಸಿದನು, ಏಕೆ? ಕತ್ತೆಯನ್ನು ಹತ್ತುವದು ಇದ್ದಕ್ಕಿದ್ದ ಹಾಗೆ ಸಂಭವಿಸದೆ, ಅದಕ್ಕಾಗಿ ಸಿದ್ಧತೆಗಳು ಸಹ ಜರುಗಿದ್ದವು ಎಂಬ ವಿವರಣೆಯನ್ನು ಮತ್ತಾಯನು ಸ್ಪಷ್ಟಪಡಿಸಿದ್ದನು. ಜೆಕರ್ಯ 9:9ಕ್ಕೆ ಇದನ್ನು ಹೋಲಿಸಲು

ಅದು ಸತ್ಯ ಸಂಗತಿಯಾಗಿದೆ.

> ಚೀಯೋನ್ ನಗರಿಯೇ, ಬಹು ಸಂತೋಷಪಡು;
> ಯೆರೂಸಲೇಮ್ ಪುರಿಯೇ, ಹರ್ಷಧ್ವನಿಗೈ!
> ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ;
> ಆತನು ನ್ಯಾಯವಂತನು, ಸುರಕ್ಷಿತನು;
> ಶಾಂತಗುಣವುಳ್ಳವನಾಗಿಯೂ
> ಕತ್ತೆಯನ್ನು, ಹೌದು, ಪ್ರಾಯದ ಕತ್ತೆಮರಿಯನ್ನು
> ಹತ್ತಿದವನಾಗಿಯೂ ಬರುತ್ತಾನೆ.

ಮುಂದೆ ಬರಬಹುದಾದ ಇಸ್ರಾಯೇಲ್ ಅರಸನ ಸೂಚನಾರ್ಥವಾಗಿ ಯೇಸು ಕತ್ತೆಯನ್ನೇರಿ ಪರಿಶುದ್ಧ ಪಟ್ಟಣವನ್ನು ಪ್ರವೇಶಿಸಿದನು. ಈ ವಿಧದ ಪ್ರವೇಶದಿಂದ ಯೇಸು ತಾನು ಅರಸನೆಂದು ಸೂಚನೆ ನೀಡಿದನು.

ಈ ಸೂಚನೆಯ ಮೂಲಕ ಆತನು ಒಂದು ರಾಷ್ಟ್ರದ ಪ್ರತಿನಿಧಿಯಾದ ಅರಸನು ಎಂದು ನಿರಾಪಿಸಿದನೇ? ಓದಿರಿ ಮಾರ್ಕ 10:42-45:

> ಯೇಸು ಅವರನ್ನು ಹತ್ತಿರಕ್ಕೆ ಕರೆದು ಅವರಿಗೆ - ಜನಗಳನ್ನಾಳುವವರೆನಿಸಿಕೊಳ್ಳುವವರು ಅವರ ಮೇಲೆ ಅಹಂಕಾರದಿಂದ ದೊರೆತನಮಡುತ್ತಾರೆ. ಮತ್ತು ಅವರಲ್ಲಿ ದೊಡ್ಡವರು ಬಲಾತ್ಕಾರದಿಂದ ಅಧಿಕಾರ ನಡೆಸುತ್ತಾರೆ ಎಂದು ನೀವು ಬಲ್ಲಿರಷ್ಟೆ; ಆದರೆ ನಮ್ಮಲ್ಲಿ ಹಾಗಿರಬಾರದು; ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ಎಲ್ಲರ ಆಳಾಗಿರಬೇಕು. ಮನುಷ್ಯಕುಮಾರನು ಸಹ ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು ಎಂದು ಹೇಳಿದನು.

ವಚನದ ಕಡೇಯ ಹೇಳಿಕೆಯಲ್ಲಿ, ಯೇಸು ತಾನು "ಬಾಧೆ ಪಡವ ಸೇವಕನು" (ಇತರರಿಗಾಗಿ ಪ್ರಾಣ ನೀಡುವವನು) ಎಂದಿರುವದನ್ನು ಯೆಶಾಯ 42:1-4 ಮತ್ತು 52:13-53:12ರ "ಸೇವಕನ ಗೀತೆಯಲ್ಲಿ" ಕಾಣುತ್ತೇವೆ. ಯೆಶಾಯ 49:3: "ಆತನು ನನಗೆ - ನೀನು ನನ್ನ ಸೇವಕನೂ ನಾನು ಪ್ರಭಾವಹೊಂದಬೇಕಾದ ಇಸ್ರಾಯೇಲೂ ಆಗದ್ದೀ ಎಂದು ಹೇಳಿದನು." ಮಾರ್ಕ 10:45 ಯೇಸು ಆ ಪಾತ್ರವನ್ನು ತಾನೇ ವಹಿಸಿದನು. ಆತನು ಕೇವಲ ಇಸ್ರಾಯೇಲ್ಯರ ಅರಸನು ಮಾತ್ರವಾಗಿರದೆ, ನಿಜ ಇಸ್ರಾಯೇಲ್ಯರ ಪ್ರತಿನಿಧಿಯೂ ಆಗಿದ್ದನು.

## ಮೆಸ್ಸೀಯ

ಇಬ್ರಿಯ ಭಾಷೆಯ "ಮೆಸ್ಸೀಯನು" ಅಂದರೆ ಅಭಿಷೇಕ ಹೊಂದಿದವನು. ವಿಶೇಷ ಸೇವೆ ಮಾಡಲು ಅರಸರನ್ನು ಪ್ರವಾದಿಗಳನ್ನು ಮತ್ತು ನ್ಯಾಯಸ್ಥಾಪಕರನ್ನು ಅಭಿಷೇಕಿಸುತ್ತಿದ್ದರು ಎಂದು ಹಳೆ ಒಡಂಬಡಿಕೆಯಲ್ಲಿ ಗಮನಿಸುತ್ತೇವೆ. ಸಹಜವಾಗಿ ಒಬ್ಬ ಮೆಸ್ಸೀಯನು ಬಂದು, ನಿರಾಶ್ರಿತರಾದ ಇಸ್ರಾಯೇಲ್ ಜನರನ್ನು ಸಂತೈಸುವನು ಎಂಬ ನಂಬಿಕೆಯು ಇತ್ತು. 2 ಸಮುವೇಲ 7ರಲ್ಲಿ ಇಂತಹ ನಂಬಿಕೆಯ ಮೂಲವನ್ನು ಗ್ರಹಿಸುತ್ತೇವೆ, ಅಲ್ಲಿ ಅರಸನಾದ ದಾವೀದನು ದೇವರಿಗಾಗಿ ಒಂದು ಮನೆಯನ್ನು ನಿರ್ಮಿಸಲು ಆಶಿಸಿದನು. ನಾತಾನನ ಮೂಲಕವಾಗಿ ದೇವರು ದಾವೀದನಿಗೆ, ಅವನು ದೇವಾಲಯವನ್ನು ನಿರ್ಮಾಣ ಮಾಡುವ ಅಗತ್ಯವಿಲ್ಲ ಎಂದು ಮುಂತಿಳಿಸಿದನು. ಅದರ ಬದಲಾಗಿ, ದೇವರೇ ದಾವೀದನಿಗಾಗಿ ಒಂದು ಮನೆಯನ್ನು ಕಟ್ಟುವನೆಂದು ಹೇಳಿದನು. ದೇವರು ಒಂದು ವಾಸಸ್ಥಳದ ಕುರಿತಾಗಿ

ಮಾತನಾಡದೆ, ಒಂದು ವಂಶದ ಕುರಿತಾಗಿ ಅಂದರೆ ಮುಂದಿನ ರಾಜವಂಶದ ಕುರಿತಾಗಿ, ದಾವೀದನ "ಮಗನಿಂದ" ಆರಂಭವಾದ ರಾಜಮನೆತನವು ಇಸ್ರಾಯೇಲ್ಯರ ಸಿಂಹಾಸನದಲ್ಲಿ ಕುಳಿತು ಕೊಳ್ಳುವದು. ಮುಂದೆ ಅದನ್ನು ದೇವರ ಮಗನೇ ಅಲಂಕರಿಸುವನು ಎಂಬುದಾಗಿದೆ. ದೇವರು ಹೇಳಿದ್ದೇನೆಂದರೆ, "ನಾನು ಅವನ ರಾಜ್ಯ ಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು. ನಾನು ಅವನಿಗೆ ತಂದೆಯಾಗಿರುವೆನು, ಅವನು ನನಗೆ ಮಗನಾಗಿರುವನು" (2 ಸಮುವೇಲ 7:13, 14ಎ). ದಾವೀದನ ಮಗನಾದ ಸೊಲೋಮೋನನು ಸಿಂಹಾಸನವೇರುವನು ಎಂಬ ಹೇಳಿಕೆಯಾಗಿದೆ. "ನಿತ್ಯವಾದ" ಎಂದು ದೇವರು ಮಾತಾಡಲು ಪ್ರಾರಂಭಿಸಿದರು. ಇಲ್ಲಿ ಮುಂತಿಳಿಸಿರುವ ಕೆಲವು ವಾಗ್ದಾನಗಳು ಸೊಲೋಮೋನನ ಕಾಲದಲ್ಲಿ ನೆರವೇರಲಿಲ್ಲ. ಅದರೆ "ಮುಂದೆ" ಬರುವದಕ್ಕಿದ್ದವನ ಸೂಚನೆಯಾಗಿದೆ. "ಮುಂದೆ ಬರುವವನೇ" ಇಸ್ರಾಯೇಲ್ಯರ ಮೆಸ್ಸೀಯ. ಇಸ್ರಾಯೇಲ್ಯರ ಸಂಕಷ್ಟದ ಕಾಲದಲ್ಲಿ, "ಅಭಿಷೇಕ" ಹೊಂದಿದ ಆ ಮೆಸ್ಸೀಯನು ಬಂದು ಅವರನ್ನು ಬಿಡುಗಡೆ ಮಾಡುವನು ಎಂದು ಬಯಸಿದ್ದರು.

ಈ ಚಿತ್ರಣಕ್ಕೆ ಯೇಸು ಹೇಗೆ ಹೋಲಿಕೆಯಾಗುವನು? ಮೊದಲನೆಯದಾಗಿ, ಹೊಸ ಒಡಂಬಡಿಕೆಯಲ್ಲಿ ಯೇಸುವನ್ನು, "ಯೇಸು ಕ್ರಿಸ್ತನು"ಎಂದು ಕರೆಯಲ್ಪಟ್ಟಿದ್ದನು. ಕ್ರಿಸ್ತನು ಅಂದರೆ ಗ್ರೀಕ್ ಭಾಷೆಯ "ಕ್ರಿಸ್ತೋಸ್," "ಮೆಸ್ಸೀಯ" ಎಂಬ ಇಬ್ರಿಯ ಪದಕ್ಕೆ ಸಮಾನವಾದದ್ದು (ಅಭಿಷೇಕ ಹೊಂದಿದವನು). ಹೊಸ ಒಡಂಬಡಿಕೆಯ, ಬರಹಗಾರರು ಯೇಸುವನ್ನು "ಯೇಸು ಕ್ರಿಸ್ತನು" ಎಂದು ಕರೆದದ್ದರಿಂದ, ಆತನ ಮೊದಲ ಹಾಗೂ ಅಂತಿಮದ ಹೆಸರನ್ನು ನೀಡಲಿಲ್ಲ. ಆತನು ಯೇಸುವಾಗಿದ್ದು, ಇಸ್ರಾಯೇಲ್ಯರು ಬಯಸಿದ್ದ ಮೆಸ್ಸೀಯನಾಗಿದ್ದನು.

ಮತ್ತಾಯ 16:13-17ರಲ್ಲಿ, ಜನರು ಯೇಸುವನ್ನು ಯಾರೆಂದು ಜನರು ಕರೆಯುವರು ಎಂಬ ಪ್ರಶ್ನೆಯನ್ನು ಕೇಳಿದನು. ಕೆಲವರು ಸ್ನಾನಿಕನಾದ ಯೇಹಾನನು; ಕೆಲವರು ಎಲಿಯನು ಅನ್ನುವರು ಅಂದರು; ಆದರೆ ಇನ್ನು ಕೆಲವರು ಯೆರೆಮೀಯನು, ಅಥವಾ ಪ್ರವಾದಿಗಳಲ್ಲಿ ಒಬ್ಬನು ಅನ್ನುವರು ಅಂದರು. ಈ ಅಂಶಗಳಲ್ಲಿ ಒಂದು ಅಂಶವು ಸಹ ಯೇಸುವಿಗೆ ಹೋಲಿಕೆಯಾಗಲಿಲ್ಲ. ಯೇಸು ಅವರೆಲ್ಲರಿಗಿಂತ ಮಹತ್ವದ ವ್ಯಕ್ತಿಯಾಗಿದ್ದನು. ಆದ್ದರಿಂದ ಯೇಸು ಅವರಿಗೆ ನೀವು ನನ್ನನ್ನು ಏನನ್ನುವಿರಿ? ಅಂದನು. ಆತನು ಅವರೊಂದಿಗೆ ಇದ್ದ ಕಾಲದಲ್ಲಿ, ಅವರು ಯೇಸುವಿನ ಕುರಿತು ಏನೆಂದು ಭಾವಿಸಿದ್ದರು? ಈ ವಿಚಾರದ ಕುರಿತು ಯಾವ ನಿರ್ಣಯವನ್ನು ಅವರು ತೆಗೆದುಕೊಂಡರು? ಇತರರು ಭಾವಿಸಿದ್ದಕ್ಕಿಂತಲೂ, ಅಪೊಸ್ತಲರು ಆತನ ಬಗ್ಗೆ ತಿಳಿದರು ಎಂಬದು ಪ್ರಮುಖ ಅಂಶವಾಗಿದೆ. ಜನರ ಪರವಾಗಿ ಪೇತ್ರನು ಮಾತನಾಡಿ, "ನೀನು ಬರಬೇಕಾದ ಕ್ರಿಸ್ತನು; ಜೀವ ಸ್ವರೂಪನಾದ ದೇವರ ಮಗನು ಎಂದನು. ಹನ್ನೆರಡು ಅಪೊಸ್ತಲರು ಒಟ್ಟಾಗಿ ಸೇರಿ, ಇಸ್ರಾಯೇಲ್ಯರು ಬಹುಕಾಲದಿಂದ ಕಾಯುತ್ತಿರುವ ಮೆಸ್ಸೀಯನೇ ಎಂದು ದೃಢಪಡಿಸಿದರು. ನಂತರ ಯೇಸು ಅವರಿಗೆ ಉತ್ತರಿಸಿ, ಯೋನನ ಮಗನಾದ ಸೀಮೋನನನೇ, ನೀನು ಧನ್ಯನು ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ ಪರಲೋಕದಲ್ಲಿರುವ ನನ್ನ ತಂದೆಯೇ ಅಂದನು." ಪೇತ್ರನ ಮಾತಿನ ಮೇರೆಗೆ ಯೇಸು ದೇವರು ತಾನೇ "ತಂದೆಯಾಗಿದ್ದಾನೆ" ಎಂದು ದೃಢಪಡಿಸಿದನು. ಅದು ದೇವರು ದಾವೀದನಿಗೆ ಮಾಡಿದ ವಾಗ್ದಾನವೇ.

ಯೆಹೂದ್ಯ ಅಧಿಕಾರಿಗಳು ಯೇಸುವನ್ನು ವಿಚಾರಿಸುವ ಸಂದರ್ಭದಲ್ಲಿ ನೀನು ಕ್ರಿಸ್ತನೋ? (ಮೆಸ್ಸೀಯನೋ) ಎಂದು ಪ್ರಶ್ನಿಸಿದರು? ಮೂರು ಸುವಾರ್ತೆಗಳಲ್ಲಿಯೂ ಈ ವಿಚಾರವನ್ನು ಗಮನಿಸುತ್ತೇವೆ (ಮತ್ತಾಯ 26:63, 64; ಮಾರ್ಕ 14:61, 62; ಲೂಕ 22:67-71). ಮತ್ತಾಯನ ಸುವಾರ್ತೆಯಲ್ಲಿ, "ನೀನೇ ಹೇಳಿದ್ದಿ" ಎಂದು ಉತ್ತರಿಸಿರುವನು. ಮಾರ್ಕನೇ "ನಾನೇ" ಎಂದಿದ್ದು, ಲೂಕನು "ಹೌದು ನಾನೇ" ಎಂದಿರುವನು. ಇವೆಲ್ಲವು ಒಂದೇ ಉತ್ತರ ವಾಗದಿದ್ದರೂ, ಪ್ರತಿ ಸಮಯದಲ್ಲೂ ಯೇಸುವಿನ ಉತ್ತರವು ಸಕಾರಾತ್ಮಕವಾಗಿತ್ತು.

ಯೇಸು ಅರಾಮ್ಯ ಭಾಷೆಯನ್ನು ಮಾತನಾಡುತ್ತಿದ್ದರಿಂದ, ಈ ವ್ಯತ್ಯಾಸವಾಗಿರಬಹುದು; ಪ್ರತಿ ಸುವಾರ್ತೆಯನ್ನು ಗ್ರೀಕ್ ಭಾಷೆಯಲ್ಲಿ ಸಂಕ್ಷಿಪ್ತಗೊಳಿಸಲಾಗಿದೆ. ಯೇಸು ತಾನು ಯಾರೆಂದು ತಿಳಿದವನಾಗಿದ್ದರೂ, ನೇರವಾದ ಉತ್ತರವನ್ನು ನೀಡಿರುವದಿಲ್ಲ, ಏಕೆಂದರೆ ಅವರು ಆತನು ನೀಡುವ ಉತ್ತರವನ್ನು ಯಥಾರ್ಥವಾಗಿ ಬಯಸಿರಲಿಲ್ಲ. ಅವರ ಪ್ರಶ್ನೆ ಏನೆಂದರೆ ನಮ್ಮನ್ನು ಬಿಡಿಸುವ, ರಾಜಕೀಯ ಹಾಗೂ ಮಿಲಿಟರಿ ವ್ಯಕ್ತಿಯೇ, ನೀನು? ಎಂಬದೆ. ಆದರೆ ಯೇಸು ತಾನು ವಾಗ್ದಾನದ ವ್ಯಕ್ತಿ, ಆತನು ಜನರನ್ನು ವೈರಿಯಾದ - ಪಾಪದಿಂದ ಬಿಡುಗಡೆ ಮಾಡಲು ಬಂದವನೇ ಹೊರತು, ರಾಜಕೀಯ ಅಥವಾ ಮಿಲಿಟರಿ ವ್ಯಕ್ತಿಯಲ್ಲ ಎಂದು ಸ್ಪಷ್ಟಪಡಿಸಿದನು.

ಲೂಕ 4:16-21 ರಲ್ಲಿ, ಮೆಸ್ಸೀಯನ ಇನ್ನೊಂದು ಚಿತ್ರಣವನ್ನು ಗಮಿಸುತ್ತೇವೆ. ನಜರೇತಿನ ಸಭಾಮಂದಿರದಲ್ಲಿ ಯೇಸು ಇದ್ದನು. ಪ್ರವಾದಿಗಳು ಓದುವ ಸಮಯದಲ್ಲಿ ಯೇಸು ಸುರುಳಿಯನ್ನು ತೆಗೆದುಕೊಂಡು ಓದಿದನು. ಅದು ಯೆಶಾಯನ ಪ್ರವಾದನೆಯ ಸುರಳಿಯಾಗಿತು,

> ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಆದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು; ಮನಮುರಿದವರನ್ನು ಕಟ್ಟಿ ವಾಸಿಮಾಡುವದಕ್ಕೂ ಸೆರೆಯವರಿಗೆ ಬಿಡುಗಡೆಯಾಗುವದನ್ನು, ಬಂದಿಗಳಿಗೆ ಕದ ತೆರೆ ಯುವದನ್ನು ಪ್ರಸಿದ್ಧಿಪಡಿಸುವದಕ್ಕೂ ಯೆಹೋವನು ನೇಮಿಸಿರುವ ಶುಭವರುಷ, ನಮ್ಮ ದೇವರು ಮುಯ್ಯಿತೀರಿಸುವ ದಿನ (ಯೆಶಾಯ 61:1, 2ಎ).

ಮುಂದೆ ಬರಬೇಕಿದ್ದ ಮೆಸ್ಸೀಯನ ಪ್ರವಾದನೆಯನ್ನು ಆತನು ಓದಿದ್ದನು. ಆದರೆ ಒಂದು ಪ್ರಮುಖ ಅಂಶವನ್ನು ಆತನು ಓದಿ, ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ (ಲೂಕ 4:21) ಅಂದನು. ಮತ್ತೊಂದು ಅರ್ಥದಲ್ಲಿ, ಮೆಸ್ಸೀಯನ ಯುಗವು ಯೇಸುವಿನಿಂದ ಆರಂಭವಾಯಿತು, ಆತನ ಕುರಿತಾಗಿ ಬರೆದಿರುವ ಆತನ ಮೇಲೆ ಆತ್ಮನು ಇರುವನು. ಆದ್ದರಿಂದ, ಬಡವರಿಗೆ ಸುವಾರ್ತೆ ಸಾರಲು ಆತನು ಆಯ್ಕೆಯಾದವನು ಎಂದು ತಿಳಿಸಿದನು.

## ಮನುಷ್ಯ ಕುಮಾರನು

ಯೇಸು ತಾನು ಮೆಸ್ಸೀಯನಾಗಿದ್ದರೂ ಅದರ ಬಗ್ಗೆ ಒತ್ತು ನೀಡಿ ಮಾತನಾಡಿರುವದಿಲ್ಲ. ಸುವಾರ್ತೆಗಳ ಪ್ರಕಾರ ಆತನು "ಮನುಷ್ಯ ಕುಮಾರನಾಗಿದ್ದನು" ಇದು ಆತನ ಪ್ರಮುಖವಾದ ನಾಮಾಂಕಿತವಾಗಿತ್ತು. ಒಬ್ಬ ವ್ಯಕ್ತಿಯ ಸ್ವಭಾವವನ್ನು ಸೂಚಿಸಲು "ಮಗನು" ಎಂಬ ಇಬ್ರಿಯ ಪದ ಬಳಕೆ ಗೊಂದಲಮಯವಾಗಿದೆ. ಉದಾಹರಣೆಗೆ ಯೂದನನ್ನು "ನಾಶನದ ಮಗನು" ಎಂದು ಕರೆಯಲಾಗಿದೆ (ಯೋಹಾನ 17:12), ಯಾಕೆಂದರೆ ಅವನು ಯೇಸುವನ್ನು ಹಿಡಿದುಕೊಟ್ಟಿದ್ದನು. ಅಪೊಸ್ತಲರಲ್ಲಿ ಒಬ್ಬನಾದ ಬಾರ್ನಬನು ಸೇವೆಯಲ್ಲಿ ಪೌಲನಿಗೆ ಸಹಾಯಿಸಿದ್ದನು. ಬಾರ್ನಬನು ಅಂದರೆ "ಧೈರ್ಯದಾಯಕ" ಎಂಬದೆ (ಅಪೊಸ್ತಲರ ಕೃತ್ಯಗಳು 4:36). ಯಾಕಂದರೆ ಅವನು ಅನೇಕರಿಗೆ ಧೈರ್ಯದಾಯಕನಾಗಿದ್ದನು. "ಮನುಷ್ಯ ಕುಮಾರನು" ಅಂದರೆ ಮನುಷ್ಯನಂಥ ಅಥವ "ಮಾನವ" ಎಂಬ ಅರ್ಥ. ಅದರ ಕುರಿತು ದಾನಿಯೇಲ 7:13, 14 ನಾವು ಆ ಪದಕ್ಕೆ ಹೋಲಿಸಬಾರದು ಎಂಬುದಾಗಿದೆ. ದಾನಿಯೇಲನ ದರ್ಶನದಲ್ಲಿ, "ಮಾನವನಂತಿದ್ದವನನ್ನು" ನೋಡಿದನು:

> "ನಾನು ಕಂಡ ರಾತ್ರಿಯ ಕನಸಿನಲ್ಲಿ ಇಗೋ, ಮನುಷ್ಯ ಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾವೃದ್ಧನನ್ನು ಸಮೀಪಿಸಿದನು,

> ಅವನನ್ನು ಆತನ ಸನ್ನಿಧಿಗೆ ತಂದರು. ಸಕಲಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು; ಅವನ ಆಳ್ವಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು."

ಈ ವಾಕ್ಯದಲ್ಲಿ "ಮಾನವನಾದ" ಮನುಷ್ಯಕುಮಾರನು ಎಂಬ ಅರ್ಥವನ್ನು ನೀಡಿರುವದಿಲ್ಲ ಆದ್ದರಿಂದ "ಮನುಷ್ಯ ಕುಮಾರನು" ಅಂದರೆ "ಮೆಸ್ಸೀಯನ" ಇನ್ನೊಂದು ನಾಮಾಂಕಿತವೆಂದು ಇಬ್ರಿಯರು ತಿಳಿದಿದ್ದರು. ಈ ಪದವು ಜನರಿಗೆ ಆಶ್ಚರ್ಯ ಉಂಟುಮಾಡಿರಬಹುದು. ಯೇಸು ತನ್ನ "ಮೆಸ್ಸಿಯತ್ವವನ್ನು" ಒತ್ತಿ ಹೇಳಿಕೊಂಡಿರುವದಿಲ್ಲ.

"ನಾನೇ ಮೆಸ್ಸೀಯನು" ಎಂದು ಯೇಸು ಏಕೆ ಹೇಳಲಿಲ್ಲ? ಇದನ್ನು ಹೇಳುವ ಅವಕಾಶ ಆತನಿಗಿತ್ತು. ಮೆಸ್ಸೀಯನ ಕುರಿತು, ಆತನು ಏನಾಗಿದ್ದನು ಎಂಬ ಕುರಿತು ಯೆಹೂದ್ಯರು ಅನೇಕ ಆಲೋಚನೆಗಳನ್ನು ಹೊಂದಿದ್ದರು. ಒಬ್ಬನು ಬಂದು ಅವರನ್ನು ರೋಮಾಯರ ರಾಜಕೀಯ ಆಡಳಿತದಿಂದ ಬಿಡಿಸುವನು ಎಂದು ನಂಬಿದ್ದರು. ಆತನು ದಾವೀದನಂತೆ ಯುದ್ಧ ವೀರನು ಎಂದು ತಿಳಿದಿದ್ದರು. ಒಂದು ವೇಳೆ ಯೇಸು ತಾನು ಮೆಸ್ಸೀಯನು ಎಂಬ ಭಾಷೆಯನ್ನು ಬಳಸಿದ್ದರೆ ಅಥವಾ ಇತರರು ಅದನ್ನು ಒಪ್ಪುವಂತೆ ಮಾಡಿದ್ದರೆ, ಒಂದು ರಾಜಕೀಯವಾದ ಕ್ರಾಂತಿಯಾಗುವ ಸಾಧ್ಯತೆಯಿತ್ತು. ಆದರೆ ಯೇಸು ಅದನ್ನು ತಡೆಗಟ್ಟಿದನು ಮೆಸ್ಸೀಯ ಎಂದು ಹೇಳಿಕೊಂಡವರು ಯಾರೇ ಆಗಿದ್ದರು ಯೆಹೂದ್ಯರು ಅಂಥವರನ್ನು ಹಿಂಬಾಲಿಸುವ ಸಾಧ್ಯತೆಯಿತ್ತು. ಆದರೆ ಯೇಸು ಅದನ್ನು ತಡೆಗಟ್ಟಿದನು. ಮೆಸ್ಸೀಯ ಎಂದು ಹೇಳಿಕೊಂಡವರು ಯಾರೇ ಆಗಿದ್ದರು ಯೆಹೂದ್ಯರು ಅಂಥವರನ್ನು ಹಿಂಬಾಲಿಸುವ ಸಾಧ್ಯತೆಯಿತ್ತು ಆದರೆ, ಯೇಸು ಅದನ್ನು ತಡೆಗಟ್ಟಿದನು. ಮೆಸ್ಸಿಯ ಎಂದು ಹೇಳಿಕೊಂಡವರು ಯಾರೇ ಆಗಿದ್ದರು, ಯೆಹೂದ್ಯರು ಅಂಥವರನ್ನು ಹಿಂಬಾಲಿಸುವ ಸಾಧ್ಯತೆಯಿತ್ತು. ಆದರೆ ಯೇಸು ಇಂಥಹ ವಿಚಾರಗಳನ್ನು ಸಮ್ಮತಿಸಲಿಲ್ಲ. ಅದು ಆತನ ಗುರಿಯಾಗಿರಲಿಲ್ಲ. ಆತನ ಶಿಷ್ಯರು ಸಹ ಇಂಥಹ ಕ್ರಮವನ್ನು ಅನುಸರಿಸಬಾರದೆಂದು ಯೇಸು ಬಯಸಿದನು. ಮತ್ತಾಯ 16:20, 21ರಲ್ಲಿ ಪೇತ್ರನು ಯೇಸುವನ್ನು ಮೆಸ್ಸೀಯನೆಂದು ಸರಿಯಾಗಿ ಗುರುತಿಸಿದ ನಂತರ, ಆತನೇ ಕ್ರಿಸ್ತನೆಂದು ಯಾರಿಗೂ ಹೇಳಬಾರದೆಂದು ಯೇಸು ತನ್ನ ಶಿಷ್ಯರಿಗೆ ಎಚ್ಚರಿಕೆ ನೀಡಿದನು. ಏಕೆ? ಆತನು ಯಾವ ಉದ್ದೇಶಕ್ಕಾಗಿ ಬಂದ ಮೆಸ್ಸೀಯನು ಎಂದು ಅವರು ಗ್ರಹಿಸಿರಲಿಲ್ಲ. ಮತ್ತಾಯ 16:20, 21, "ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು. ಆಗ ಆತನು - ನಾನು ಕ್ರಿಸ್ತನಾಗಿದ್ದೇನೆಂಬದನ್ನು ಯಾರಿಗೂ ಹೇಳ ಬೇಡಿರಿ ಎಂದು ಶಿಷ್ಯರಿಗೆ ಖಂಡಿತವಾಗಿ ಹೇಳಿದನು. ಅಂದಿನಿಂದ ಯೇಸು ಕ್ರಿಸ್ತನು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವದಕ್ಕೆ ಪ್ರಾರಂಭ ಮಾಡಿದನು."

ಹೌದು ಅವರು ಆತನನ್ನು ಮೆಸ್ಸೀಯನೆಂದು ಕರೆಯದೆ ಆತನು ನಾಶಮಾಡವದಕ್ಕೂ, ರಾಜ್ಯವನ್ನೂ ಗೆಲ್ಲುವದಕ್ಕೂ ಬಾರದೆ, ವೇದನೆ ಪಟ್ಟು ಮರಣ ಹೊಂದುವದಕ್ಕೆ ಬಂದ ಮೆಸ್ಸೀಯನೆಂದು ಅವರು ತಿಳಿಯಬೇಕಿತ್ತು. ಈ ಮೇಲಿನ ಹೇಳಿಕೆಗಳೆಲ್ಲವೂ, ಯೇಸುವಿನ ಕಾಲದಲ್ಲಿ ಇದ್ದ ಕ್ರಿಯೆಗಳಿಗೆ ಹೊಂದಾಣಿಕೆಯಾಗಿದ್ದ ವಿಚಾರಗಳಾಗಿದ್ದವು. ಆತನು ಮನುಷ್ಯನ ಮಗನಾಗಿದ್ದರು, "ಮೆಸ್ಸೀಯನು" ಎಂಬ ನಾಮಾಂಕಿತಕ್ಕೆ ಅರ್ಹನಾಗಿದ್ದನು.

## ದೇವ ಕುಮಾರನು

ಮತ್ತಾಯ 16:16ರಲ್ಲಿ ಯೇಸುವಿನ ಪ್ರಶ್ನೆಗೆ ಪೇತ್ರನು ಉತ್ತರ ನೀಡಿದ ನಂತರ, ಆತನ

ಉತ್ತರವು ದ್ವಿಮುಖವಾಗಿತ್ತು: ನೀನು ಕ್ರಿಸ್ತನು, ಜೀವಸ್ವರೂಪನಾದ ದೇವರ ಮಗನು. ಅದೇ ವಿಧದಲ್ಲಿ, ಯೇಸುವಿನ ವಿಚಾರಮಾಡಿದ ಯೆಹೂದ್ಯರು ನಿಜವಾಗಿ ನೀನು ದೇವರ ಮಗನಾದ ಕ್ರಿಸ್ತನೇ? (ಮತ್ತಾಯ 26:63) ಅಂದರು.

ಯೇಸುವಿನ ಉತ್ತರದಲ್ಲಿ ಆತನೇ ಮೆಸ್ಸೀಯನು ಹಾಗೂ ಕ್ರಿಸ್ತನು ಎಂದು ದೃಢಪಟ್ಟಿತ್ತು. ಮತ್ತಾಯ 11:25-27:

> "ಆ ಸಮಯದಲ್ಲಿ ಯೇಸು ಹೇಳಿದ್ದೇನಂದರೆ - ತಂದೆಯೇ, ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ. ಹೌದು, ತಂದೆಯೇ, ಹೀಗೆ ಮಾಡುವದೇ ಒಳ್ಳೇದೆಂದು ನಿನ್ನ ದೃಷ್ಟಿಗೆ ತೋಶಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. ನನ್ನ ತಂದೆಯು ಎಲ್ಲವನ್ನೂ ನನಗೆ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ; ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳ ವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ."

ಯೇಸು ದೇವರನ್ನು "ನನ್ನ ತಂದೆಯೇ" ಎಂದು ಹೇಳಿ, ಆತನು ದೇವರ ಪ್ರತಿನಿಧಿ ಎಂದು ತೋರ್ಪಡಿಸಿಕೊಂಡನು. ಯೋಹಾನ 5:16-18 ಅದಕ್ಕೆ ಸಬಂಧಪಟ್ಟ ವಾಕ್ಯಭಾಗವಾಗಿದೆ. ಆಗ ತಾನೇ ಯೇಸು ಒಬ್ಬ ಹುಟ್ಟು ಕುಂಟನನ್ನು ಸಬ್ಬತ್ತಿನಲ್ಲಿ ಗುಣಪಡಿಸಿದ್ದನು ಅದರ ನಿಮಿತ್ತ ವಾಗಿ ಯೆಹೂದ್ಯರು ಕುಂಟನನ್ನು ವಿಚಾರಣೆಗೆ ಒಳಪಡಿಸಿದ್ದರು ಆಗ ಯೇಸು ನನ್ನ ತಂದೆಯು ಕೆಲಸ ಮಾಡುತ್ತಿರುವದರಿಂದ, ನಾನುಸಹ ಕೆಲಸ ಮಾಡಬೇಕು ಎಂದು ಹೇಳಿದ್ದನು. ಇಲ್ಲಿಯೂ ಸಹ ಆತನ ಪುತ್ರತ್ವವನ್ನು ತಿಳಿಸಲಾಗಿದೆ:

> ನಿಮಗೆ ಸತ್ಯವಾಗಿ ಹೇಳುತ್ತೇನೆ - ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ *ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದುಹೋಗಲಾರದು* (ವಚನ 5:18; ಒತ್ತಿ ಹೇಳಿದ್ದು ನನ್ನದು).

ಯೇಸು ದೇವ ಸಮಾನನು ಎಂಬ ಸೂಚನಾರ್ಥವಾಗಿ, ತಾನು ದೇವರ ಮಗನೆಂದು ಸಮರ್ಥಿಸಿಕೊಂಡಿದ್ದನು ಯೆಹೂದ್ಯರು ತಿಳಿದಿದ್ದರು. ನಂತರದಲ್ಲಿ ಯೇಸು, "ನಾನು ನನ್ನ ತಂದೆಯು ಒಂದೇ ಆಗಿದ್ದೇವೆ" ಎಂಬ ಗಮನಾರ್ಹನವಾದ ಹೇಳಿಕೆಯನ್ನು ನೀಡಿದ್ದನು (ಯೋಹಾನ 10:30). ಈ ಹೇಳಿಕೆಯು ದೇವರ ಮತ್ತು ಆತನ ಮಗನ ಒಂದೇ ವ್ಯಕ್ತಿತ್ವ ಎಂಬ ಸಮರ್ಥನೆಯಾಗಿರದೆ, ಅವರು ಒಂದೇ ಉದ್ದೇಶದ ಸಮನಾಂತರ ಎಂಬ ಅರ್ಥವಾಗಿದೆ - ಅದು ಸತ್ಯವೇ ಆಗಿದೆ.

ಯೇಸು ದೇವರ ಮಗನೆಂಬುದರಲ್ಲಿ ಯಾವ ಅರ್ಥವಿದೆ? "ಯೇಸು ದೇವರ ಮಗನೆಂಬುದು" ಕ್ರೈಸ್ತರ ಒಂದು ಪ್ರಸಿದ್ಧವಾದ ಹೇಳಿಕೆಯಾಗಿದೆ. ಈ ವಾಕ್ಯವು ಏನೆಂದು ಹೇಳುತ್ತದೆ ಎಂದು ಪ್ರಶ್ನಿಸಿವುದನ್ನು ಬಿಟ್ಟು ಬಿಡುವೆವೋ, ಯೇಸುವಿನ ಈ ಹೇಳಿಕೆ ಯಲ್ಲಿ ನಾವುಗಳು ಏನನ್ನು ಗ್ರಹಿಸಬಹುದು?

ಮೊದಲನೆಯದಾಗಿ, ಇಲ್ಲಿ ದೇವರ ಹಾಗೂ ಯೇಸುವಿನ ನಡುವಿನ ನಿಖರವಾದ ಸಂಬಂಧವನ್ನು ಕಾಣುತ್ತೇವೆ. ದೇವದೂತರನ್ನು ಸಹ ದೇವರ ಮಕ್ಕಳೆಂದು ಸತ್ಯವೇದದಲ್ಲಿ ಬರೆದಿದ್ದರೂ, ಯೇಸುವಿನ ಸಂಬಂಧ ವಿಶೇಷವಾದದ್ದು ಈ ವಿಚಾರದ ನಿಮಿತ್ತವಾಗಿ ಆತನಿಗೆ ಅನೇಕ ವೈರಿಗಳಿದ್ದರು. ಯೋಹಾನ 3:16ರಲ್ಲಿ, "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿ ಯನ್ನು ಇಟ್ಟು ತನ್ನ *ಒಬ್ಬನೇ ಮಗನನ್ನು* ಕೊಟ್ಟನು." ಆತನನ್ನು ನಂಬುವ ಒಬ್ಬನಾದರೂ

ನಾಶವಾಗದೆ ಎಲ್ಲರು ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. "ಒಬ್ಬನೇ ಮಗನು" ಅಂದರೆ "ನಿರ್ಧಿಷ್ಟವಾದ" "ಒಬ್ಬನೇ" ಎಂಬ ಗ್ರೀಕ್ ಪದದ ಅರ್ಥವಾಗಿದೆ. ತಾನು ದೇವರ ಮಗನೆಂದು ತಿಳಿಸಿ, ತನಗೂ ಮತ್ತು ದೇವರಿಗೂ ಇರುವ ನಿಖರವಾದ ಸಂಬಂಧವನ್ನು ತಿಳಿಸಿರುವನು.

ಎರಡನೆಯದಾಗಿ, ದೇವರ ಮಗನು ಎಂಬುದರಲ್ಲಿ, ತಾನು ದೇವರಿಗೆ ಸಮಾನನು ಎಂದು ತೋರ್ಪಡಿಸಿರುವನು. ಇದನ್ನು ಯೇಸುವಿನ, ಹಾಗೂ ಜನರ ಪ್ರತಿಕ್ರಿಯೆಯಲ್ಲಿ ದೃಢಪಡಿಸಲಾಗಿದೆ ("ತನ್ನನ್ನು ದೇವರ ಮಗನಾಗಿ ಮಾಡಿಕೊಂಡನು ಎಂದು ದೂರವಾ ಗಿದೆ") ಮಗನು ಎಂಬುದರಲ್ಲಿ, ದೈವತ್ವವನ್ನು ಕಾಣುತ್ತೇವೆ. ಈ ಹೇಳಿಕೆಯಲ್ಲಿ ಯೇಸು ತಾನು ದೇವರಿಗೆ ಸಮೀಪನು ಎಂದು ಹೇಳದೆ, ನಾನು ದೇವರಿಗೆ ಸಮಾನನು ಹಾಗೂ ಒಂದೇ ಎಂಬ ಅರ್ಥವನ್ನು ನೀಡಿರುವನು. ಆದ್ದರಿಂದಲೇ ತನ್ನಲ್ಲಿ ಕ್ಷಮಿಸುವ ಅಧಿಕಾರವಿದೆ ಎಂದು ದೃಢೀಕರಿಸಿರುವನು (ಮಾರ್ಕ 2:5-7), ಹಾಗೂ ಎಲ್ಲರು ಒಂದು ದಿನ ದೇವರ ನ್ಯಾಯ ತೀರ್ಪಿನ ಬಳಿ ನಿಲ್ಲುವರು ಎಂದು (ನೋಡಿರಿ ಮತ್ತಾಯ 7:22, 23), ಆತನೊಂದಿಗೆ ಎಲ್ಲರು ಒಂದಾಗಬೇಕೆಂದು ತಿಳಿಸಿದನು (ಮತ್ತಾಯ 10:32, 33).

ಮೂರನೆಯದಾಗಿ, ಆತನು ದೇವರ ಮಗನು ಎಂದು ಹೇಳಿಕೊಂಡಿರುವದರಲ್ಲಿ (ನೋಡಿರಿ ಮತ್ತಾಯ 10:32, 33; ಲೂಕ 10:22) ದಾವೀದನ ಮಗನಾದವನು, 2 ಸಮುವೇಲ 7ರಂತೆ, ತಾನು ವಾಗ್ದಾನದ "ಮಗನಾದ ದಾವೀದ" ನೊಂದಿಗೆ "ಸಮಾನನು, ದಾವೀದನ ವಾಗ್ದಾನದ ಮನೆಯ ಪ್ರತಿಸ್ಥಾಪಕನು ಎಂದು ತೋರ್ಪಡಿಸಿಕೊಂಡನು." "ನಾನು ಅವನಿಗೆ ತಂದೆಯಾಗಿರುವನು ಅವನು ನನಗೆ ಮಗನಾಗಿರುವನು" (2 ಸಮುವೇಲ 7:14). ಇದರಲ್ಲಿ ಆತನು ಮೆಸ್ಸೀಯನು ಎಂದು ಸಹ ದೃಢಪಡಿಸಲಾಗಿದೆ.[2]

## ಆತನ ಕುರಿತಾದ ಇತರ ಸೂಚನೆಗಳು

ಯೇಸು ತನ್ನ ಬಗ್ಗೆ, ಆತನು ಮೆಸ್ಸೀಯನು, ಮನುಷ್ಯ ಕುಮಾರನು ಹಾಗೂ ದೇವ ಕುಮಾರನೆಂದು ತೋರ್ಪಡಿಸಿಕೊಂಡನು, ಹೀಗಿರುವಲ್ಲಿ ತನ್ನ ಬಗ್ಗೆ ಇತರೆ ಯಾವ ಸೂಚನೆಗಳನ್ನು ಆತನು ನೀಡಿರಬಹುದು?

ಯೋಹಾನನ ಸುವಾರ್ತೆಯಲ್ಲಿ ಆತನು ತನ್ನ ಬಗ್ಗೆ (5:19, 25; 6:26, 47, 53; 8:34, 58), "ನಿಜ ನಿಜವಾಗಿ ನಿಮಗೆ ಹೇಳುತ್ತೇನೆ" ಎಂದಿರುವನು (ಇತರೆ ಅನುವಾದ ದಲ್ಲಿ ಆಮೇನ್ ಆಮೇನ್ ಎಂಬುದಾಗಿದೆ). ಈ ಹೇಳಿಕೆಯ ಮೂಲಕ, ಹೇಳಿರುವಾತನ ಸ್ವಭಾವವನ್ನು ಅರ್ಥೈಸಬಹುದಾಗಿದೆ. ಯೇಸು ತನ್ನ ಬೋಧನೆಯಲ್ಲಿರುವ ಅಧಿಕಾರವನ್ನು ತೋರ್ಪಡಿಸಿ: ತನ್ನ ಬಗ್ಗೆ ತಾನೇ ಹೇಳಿಕೆಯನ್ನು ನೀಡಿರುವನು. ಯೇಸು ತಾನು ಹೇಳಿದಂತೆ ಇರದೆ ಇದ್ದರೆ, ಆತನು ಅಹಂಕಾರದ ವ್ಯಕ್ತಿಯೆಂದು ಕಾಣುತ್ತಿದ್ದನು.

ಲೂಕ 6:1-5ರಲ್ಲಿ, ಯೇಸುವಿನ ಕುರಿತ ಇನ್ನೊಂದು ಹೇಳಿಕೆಯಿದೆ. ಯೇಸು ಮತ್ತು ಆತನ ಶಿಷ್ಯರು ಸಬ್ಬತ್ತಿನಲ್ಲಿ ತೆನೆಗಳಿದ್ದ ಹೊಲವನ್ನು ಹಾದು ಹೋಗುತ್ತಿದ್ದರು. ಶಿಷ್ಯರು ಹಸಿದಿದ್ದರಿಂದ ಕೆಲವು ತೆನೆಗಳನ್ನು ಕಿತ್ತು ತಿಂದರು. ಈ ಕಾರ್ಯವು ಫರಿಸಾಯರಿಗೆ ಒಂದು ಕೆಲಸದಂತೆ ಕಂಡಿತು, ಯಾಕಂದರೆ ಅವರು ಧರ್ಮಶಾಸ್ತ್ರದ ಪಾಲಕರಾಗಿದ್ದರು. ಅವರು ಯೇಸುವನ್ನು ಹಾಗೂ ಆತನ ಅನುಯಾಯಿಗಳನ್ನು ಟೀಕಿಸಿದರು. ಅವರ ಟೀಕೆಗೆ ಯೇಸು ಎರಡು ವಿಧದ ಪ್ರತಿಕ್ರಿಯೆ ನೀಡಿದನು. (1) ದಾವೀದನು ಹಸಿದಾಗ, ನೋಬನ ಮಂದಿರದ ಬಳಿಯಲ್ಲಿ ಮಾಡಿದ ಹಳೆ ಒಡಂಬಡಿಕೆಯ ಕಾರ್ಯವನ್ನು ಅವರು ಅರಿಯದವರಾಗಿದ್ದರು. ದಾವೀದನು ಸೌಲನಿಂದ ತಪ್ಪಿಸಿಕೊಂಡು ಹೋಗುವಾಗ, ದೇವ ಸನ್ನಿಧಿಯಲ್ಲಿದ ಆಹಾರವನ್ನು ತಿಂದನು. ಮಾನವನ ಅನಿರೀಕ್ಷಿತವಾದ ಸಂದರ್ಭದಲ್ಲಿ ನಿಯಮವನ್ನು ಮೀರಬಹುದು ಎಂಬುದಕ್ಕೆ ಈ ಘಟನೆಯು ಒಂದು ನಿದರ್ಶನವಾಗಿದೆ. (2) ಯೇಸುವಿನ ಪ್ರತಿಕ್ರಿಯೆಯಿಂದ ಆತನು ದೇವದೂಷಣೆ

ಮಾಡಿದನು ಎಂಬ ಭ್ರಮೆಯನ್ನು ಅವರು ಹೊಂದಿದರು: ಆದರೆ ಯೇಸು ಅವರಿಗೆ ಆತನು ಸಬ್ಬತ್ತಿಗೆ ಒಡೆಯನು ಎಂಬುದನ್ನು ಸ್ಪಷ್ಟ ಪಡಿಸಿದ್ದನು. ಅಂದರೆ ಇಸ್ರಾಯೇಲ್ಯರ ಒಂದು ಪ್ರಮುಖವಾದ ಪರಿಶುದ್ಧವಾದ ಸಂಗತಿಯ ಮೇಲೆ ಯೇಸು ಅಧಿಕಾರ ಹೊಂದಿದ್ದನು ಎಂದು ಇದರಿಂದ ತಿಳಿಸಿದನು. ಸಬ್ಬತ್ ದೇವರಿಂದ ಸ್ಥಾಪನೆಗೊಂಡ ಕಾರಣದಿಂದ, ಅದರ ಅಧಿಕಾರವನ್ನು ದೇವರೇ ಹೊಂದಿದ್ದನು ಎಂಬ ಅರ್ಥವನ್ನು ನೀಡಿತ್ತು.

ಅದೇ ರೀತಿಯಲ್ಲಿ ಯೇಸು ದೇವಾಲಯವನ್ನು ಶುದ್ಧ ಮಾಡಿದ ಕ್ರಿಯೆಯಲ್ಲಿ (ಒಂದು ಸಾಮ್ಯ) ಆತನ ಅಧಿಕಾರವನ್ನು ಆತನು ಪ್ರಕಟಪಡಿಸಿದ್ದನು. ಅದನ್ನು ಉತ್ತಮವಾದ ಬಳಕೆಗಾಗಿ ಯೇಸು ಅದನ್ನು ಶುದ್ಧಮಾಡದೆ, ಅದರ ಮೇಲೆ ತನಗಿದ್ದ ದೈವೀಕವಾದ ಅಧಿಕಾರವನ್ನು ತೋರ್ಪಡಿಸಿದನು. ಆದ್ದರಿಂದ "ನೀನು ಇದನ್ನಲ್ಲ ಯಾವ ಅಧಿಕಾರದಿಂದ ಮಾಡುತ್ತಿ" ಎಂಬ ಪ್ರಶ್ನೆಯನ್ನು ಯಾಜಕರು, ಸದ್ದುಕಾಯರು, ಹಾಗೂ ಹಿರಿಯರು ಕೇಳಿದ್ದರು (ಲೂಕ 20:2). ದೇವರ ಅಧಿಕಾರವನ್ನು ಚಲಾಯಿಸುತ್ತಿದ್ದ ವ್ಯಕ್ತಿ ಮಾತ್ರ, ಈ ಕಾರ್ಯಗಳನ್ನು ಮಾಡುವ ಸಾಧ್ಯತೆಯಿತ್ತು.

ಅಂತಿಮವಾಗಿ ಇನ್ನೊಂದು ನಿದರ್ಶನವನ್ನು ಗಮನಿಸೋಣ. ಯೋಹಾನ 8ರಲ್ಲಿ ಆತನು ದೆವ್ವಹಿಡಿದವನು, ಸಮಾರ್ಯದವನು, ಸೈತಾನನು ಆತನ ತಂದೆಯೆಂದು ಜನರು ಆತನನ್ನು ಟೀಕೆ ಮಾಡಿದ್ದರು. ನಂತರ "ಆತನು ಅಬ್ರಹಾಮನ ಸಂತತಿಯ" ಕುರಿತಾಗಿ ಟೀಕಿಸಿದರು (8:53). ಆದರೆ ಯೇಸು ಪ್ರತಿಕ್ರಿಯಿಸಿ, "ಅಬ್ರಹಾಮನು ನನ್ನ ದಿನವನ್ನು ತಾನು ನೋಡೆನೆಂದು ಉಲ್ಲಾಸಪಟ್ಟನು" (8:56). ಅದಕ್ಕೆ ಅವರು ಪ್ರತಿವಾದ ಮಾಡಿ, "ನಿನಗೆ ಇನ್ನು ಐವತ್ತು ವರುಷವಾಗಿಲ್ಲ, ಅಬ್ರಹಾಮನನ್ನು ನೋಡಿದ್ಧಿಯಾ?" ಅಂದಾಗ ಯೇಸು - ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ ಅಂದನು ಅವರು ಈ ಮಾತನ್ನು ಕೇಳಿ ಆತನನ್ನು ಕೊಲ್ಲುವದಕ್ಕೆ ಕಲ್ಲುತಕ್ಕೊಂಡರು (8:58). ಇಲ್ಲಿ ಎರಡು ಸಂಗತಿಗ ಳನ್ನು ಗಮನಿಸಬಹುದು. (1) ಅಬ್ರಹಾಮನಿಗಿಂತ ಮುಂಚೆ ಇದ್ದವನು ಎಂದು ತನ್ನ ದೈವತ್ವವನ್ನು ತೋರ್ಪಡಿಸಿದನು. (2) ಆತನು "ನಾನು" ಎಂಬುದಾಗಿ ಹೇಳಿದ ಹೇಳಿಕೆಯು, ದೇವರು ಮೋಶೆಗೆ ಹೇಳಿದ ಹೇಳಕೆಯೆಂದು ಪ್ರತಿ ಯೆಹೂದ್ಯನು ತಿಳುಕೊಂಡಿದ್ದನು (ವಿಮೋಚನಕಾಂಡ 3). ನಿನ್ನನ್ನು ಯಾರು ಕಳುಹಿಸಿದರು ಎಂಬ ಐಗುಪ್ತರ ಪ್ರಶ್ನೆಗೆ, ದೇವರು ನಾನು "ನಾನೇ" ಆಗಿದ್ದೇನೆ ಎಂಬ ಪ್ರತ್ಯುತ್ತರ ನೀಡಿದನು. ದೇವರು "ನಾನು" ಎಂಬ ನಾಮದಿಂದ ಅವರೊಂದಿಗೆ ಒಡಂಬಡಿಕೆ ಮಾಡಿಕೊಂಡನು. ಆದ್ದರಿಂದ ಯೇಸು *"ನಾನೇ"* ಎಂದು ಹೇಳಿದ ಕಾರಣ, ಯೆಹೂದ್ಯರು ಕಲ್ಲುಗಳನ್ನು ತಕ್ಕೊಂಡರು. ಇದು ನಿರ್ದಿಷ್ಟವಾದ ಸತ್ಯ ಅಥವಾ ದೇವದೂಷಣೆ.

## ಮುಕ್ತಾಯ

ಯೇಸು ತಾನು ಯಾರೆಂದು ಪ್ರಕಟಿಸಿಕೊಂಡನು? ಅದು ಸರಳವಾದ ಪ್ರಶ್ನೆಯಾದರು, ಅದಕ್ಕೆ ಯೋಗ್ಯವಾದ ಉತ್ತರ ನೀಡಲಾಗಿದೆ. ಯೇಸು ತಾನು ಇಸ್ರಾಯೇಲ್ಯರ ಮೆಸ್ಸೀಯನು, ದೇವರ ಮಗನು, ಹಾಗೂ ಮನುಷ್ಯ ಕುಮಾರನು ಎಂದು ಪ್ರಕಟಿಸಿದನು. ಈ ಹೇಳಿಕೆಯ ಬಗ್ಗೆ ನಂಬದವರು, ಆತನು ನೀಡಿರುವ ಸಾಕ್ಷಾಧಾರಗಳ ಮೂಲಕ ಈ ಸತ್ಯವನ್ನು ಅಂಗೀಕರಿಸಲೇಬೇಕು, ನಂತರ ನಾವುಗಳು ಆತನು ಕೇಳಿದ, "ಜನರು *ನನ್ನನ್ನು* ಏನನ್ನುತ್ತಾರೆ?" ಎಂಬ ಪ್ರಶ್ನೆಗೆ ಉತ್ತರ ಹೇಳಬೇಕು (ಮತ್ತಾಯ 16:15; ಒತ್ತಿ ಹೇಳಿದ್ದು ನನ್ನದು).

### ಟಿಪ್ಪಣಿಗಳು

[1]R. W. Funk, *Honest to Jesus* (San Francisco: HarperSanFrancisco, 1996), 300. A critique of this approach appears in James D. G. Dunn, *A New Perspective on Jesus: What the Quest for the Historical Jesus Missed* (Grand Rapids, Mich.: Baker Academic, 2005), 21-22. [2]A statistical summary of various titles used for Jesus in the New Testament is given in Craig A. Evans, *Fabricating Jesus: How Modern Scholars Distort the Gospels* (Downers Grove, Ill.: InterVarsity Press, 2006), 191-93.